ಇಂಗ್ಲಿಷ್ ಮೂಲ: ರವೀಂದ್ರನಾಥ ಟ್ಯಾಗೋರ್
ಕನ್ನಡಕ್ಕೆ: ಸಿದ್ಧರಾಜ ಪೂಜಾರಿ

ಕಲೆ: ವೆಂಕಟ್ರಮಣ ಭಟ್

# ನಯಾಂಜೋರದ ಬಾಬೂಗಳು

*ಭಾಗ: ಒಂದು*

ಒಂದಾನೊಂದು ಕಾಲಕ್ಕೆ, ನಯಾಂಜೋರದ ಬಾಬೂಗಳು ಸುಪ್ರಸಿದ್ಧ ಜಮೀನುದಾರರಾಗಿದ್ದರು. ಅವರು ತಮ್ಮ ರಾಜವೈಭೋಗದ ದುಂದು ವೆಚ್ಚಕ್ಕೆ ಹೆಸರಾಗಿದ್ದರು. ಅತ್ಯಂತ ಸುಕೋಮಲವಾದ ಢಾಕಾ ಮಸ್ಲಿನ್ ಬಟ್ಟೆಯ ಅಂಚು ಅವರಿಗೆ ಒರಟೆನಿಸಿ, ಅದು ತಮ್ಮ ತ್ವಚೆಯನ್ನು ತರಚಿಕೊಳ್ಳುವುದೆಂಬ ಕಾರಣಕ್ಕೆ, ಅದನ್ನು ಅವರು ಕತ್ತರಿಸಿ ಹಾಕಿ ಧರಿಸಿಕೊಳ್ಳುತ್ತಿದ್ದರು. ಅಷ್ಟೇ ಏಕೆ, ಬೆಕ್ಕಿನ ಮರಿಯ ಮದುವೆಗಾಗಿ ಅವರು ಸಹಸ್ರಾರು ರೂಪಾಯಿಗಳನ್ನು ಖರ್ಚು ಮಾಡಿದ್ದುಂಟು. ಒಂದು ದೀಪಾವಳಿ ಹಬ್ಬದ ಸಂದರ್ಭದಲ್ಲಿ, ಅವರು ರಾತ್ರಿಯನ್ನು ಹಗಲಾಗಿ ಪರಿವರ್ತಿಸಲು, ಅಸಂಖ್ಯ ದೀಪಗಳನ್ನು ಹಚ್ಚಿಟ್ಟು, ಝಗಝಗಿಸುವ ಬೆಳ್ಳಿಯ ತಂತುಗಳನ್ನು, ಆಕಾಶದಿಂದ ಧಾರೆ ಧಾರೆಯಾಗಿ ಇಳಿಬಿಟ್ಟು, ಸೂರ್ಯನನ್ನು ಅನುಕರಿಸುವ ಸಾಹಸ ಮಾಡಿದ್ದರು. ಅವು ಮಹಾಪೂರ ಬರುವುದಕ್ಕಿಂತ ಮುಂಚೆಯ ದಿನಗಳಾಗಿದ್ದವು. ಒಮ್ಮೆ, ವಿನಾಶಕಾರೀ ಮಹಾಪೂರ ಬಂದು, ಎಲ್ಲವನ್ನು ಕೊಚ್ಚಿಕೊಂಡು ಹೋಯಿತು. ಹೀಗಾಗಿ, ಆ ಹಳೆಯ ಲೋಕದ ನಮ್ಮ ಈ ಬಾಬೂಗಳ ವಂಶಸ್ಥರ ರಾಜವೈಭೋಗದ ಹವ್ಯಾಸಗಳು ಹಾಗೂ ವಾರಸುದಾರಿಕೆ ಬಹಳ ದಿನಗಳ ಕಾಲ ಮುಂದುವರೆಯಲಿಲ್ಲ. ಒಂದು ಹಣತೆಯಲ್ಲಿ ಬಹಳಷ್ಟು ಬತ್ತಿಗಳನ್ನು ಹಾಕಿ ದೀಪಗಳನ್ನು ಹಚ್ಚಿದ ಮೇಲೆ ಎಣ್ಣೆ ತೀರಿ, ಬೆಳಕು ಆರಿ ಹೋದಂತೆ ಅವರ ಸ್ಥಿತಿ ಆಯಿತು.

ನಮ್ಮ ನೆರೆಮನೆಯ ಕೈಲಾಸಬಾಬು ಎಂಬಾತ ಈ ಅಳಿದ ವೈಭವದ ಕೊನೆಯ ಕುರುಹಾಗಿದ್ದನು ಎನ್ನಬೇಕು. ಆತ ಬೆಳೆದು ದೊಡ್ಡವನಾಗುವುದಕ್ಕೆ